ಶ್ರೀ ಜಿ. ಪುಟ್ಟಸ್ವಾಮಿಗೌಡ :– ಅದು ಬಂದಿದ್ದರೂ ಕೂಡ ಅದನ್ನು ಗೌರ್ನಮೆಂಟ್ ಕಮಿಟಿಯವರು ತೀರ್ಮಾನ ಮಾಡಬೇಕು ತೀರ್ಮಾನವಾಗುವುದಕ್ಕೆ ಮೊದಲೇ ಇಷ್ಟಾಗಿದೆಯೆಂದು ಹೇಳುವುದಕ್ಕಾಗುವುದಿಲ್ಲ.

ಅಧ್ಯಕ್ಷರು :– ಈಗ 68ನೇ ನಿಯಮದ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ಅಲ್ಪಾವಧಿ ಚರ್ಚೆ ಶ್ರೀ ಡಿ.ಬಿ. ಚಂದ್ರೇಗೌಡ.

ಶ್ರೀ ಸಿ. ಬೈರೇಗೌಡ :– ಈ ಸರ್ಕಾರಿ ಆಜ್ಞೆಯಲ್ಲಿ ಟರೌಡರ್ ಮಾಡಿ ಹೆಚ್ಚಿಗೆ ಹಣವನ್ನು ಕೊಟ್ಟಿದ್ದಾರೆ. ಅವರು ತಂದಿರತಕ್ಕಂತಹ ರೇಟ್ ಸರ್ಕಾರದ ಹತ್ತಿರವಿದೆ. ಅದನ್ನು ಹೇಳುತ್ತಿಲ್ಲ. ಆದ್ದರಿಂದ ಇದರಲ್ಲಿ ಕೋಟ್ಯಾಂತರ ರೂಪಾಯಿ ಅವ್ಯವಹಾರ ನಡೆಯುತ್ತಿದೆಯೆಂದು ನನ್ನ ಆಪಾದನೆ.

ಅಧ್ಯಕ್ಷರು :– ಆಯಿತು, ಬರೆದು ಕಳುಹಿಸಿ.

1992ನೇ ಇಸವಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ವಿಧೇಯಕವನ್ನು ಸಂಯುಕ್ತ ಪರಿಶೀಲನಾ ಸಮಿತಿಗೆ ಒಪ್ಪಿಸುವ ಬಗ್ಗೆ ಪ್ರಸ್ತಾಪ.

(ಮುಂದಿನ ಮತ್ತು ಅಂಗೀಕಾರ)

ಶ್ರೀ ಎಂ ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ಸಚಿವರು) :– ಮಾನ್ಯ ಅಧ್ಯಕ್ಷರೇ, 1992ನೇ ಇಸವಿಯ ಕರ್ನಾಟಕ ರಾಜ್ಯ ಮುಕ್ತವಿಶ್ವವಿದ್ಯಾನಿಲಯ ವಿಧೇಯಕವನ್ನು 15 ಜನ ವಿಧಾನ ಸಭೆಯ ಹಾಗೂ 5 ಜನ ವಿಧಾನಪರಿಷತ್ತಿನ ಒಟ್ಟು 20 ಸದಸ್ಯರಿರುವ ಸಂಯುಕ್ತ ಪರಿಶೀಲನಾ ಸಮಿತಿಗೆ ಒಪ್ಪಿಸಬೇಕೆಂದು ಹಾಗೂ ಆದಕ್ಕಾಗಿ ವಿಧಾನ ಪರಿಷತ್ತಿನ ಒಪ್ಪಿಗೆಯನ್ನೂ ಪಡೆಯಬೇಕೆಂದು ಈ ಕಳಕಂಡ ವಿಧಾನ ಸಭೆಯ ಸದಸ್ಯರು ಸಂಯುಕ್ತ ಪರಿಶೀಲನಾ ಸಮಿತಿಯ ಸದಸ್ಯರಾಗಿರಬೇಕೆಂದು ಹಾಗೂ ಸಮಿತಿಯ ವರದಿಯನ್ನು 25–4–1992ರೊಳಗಾಗಿ ಸದನಕ್ಕೆ ಮಂಡಿಸಬೇಕೆಂದು ಸೂಚಿಸುತ್ತೇನೆ.

ಅಧ್ಯಕ್ಷರು :– ಪ್ರಸ್ತಾವವನ್ನು ಮಂಡಿಸಲಾಯಿತು. ಹಾಗೂ ಅಂಗೀಕರಿಸಲಾಯಿತು.

ಮಾನ್ಯ ಸದಸ್ಯರು :– 25–4–92ರ ಒಳಗಡೆ ಆಗುವುದಿಲ್ಲ.

ಶ್ರೀ ಎಂ. ವೀರಪ್ಪಮೊಯ್ಲಿ : ಪ್ರಯತ್ನ ಮಾಡೋಣ, ಅದರ ನೆಕ್ಸ್ಟ್ ಅಕಾಡೆಮಿಕ್ ಇಯರ್ ಆಗುವುದಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ :– ಮತ್ತೆ ಸಮಯವನ್ನು ಎಕ್ಸ್‌ಟೆಂಡ್ ಮಾಡಿ ಎಂದು ಕೇಳುವುದರ ಬದಲು ಈಗ ಸ್ವಲ್ಪ ಆಲೋಚನೆ ಮಾಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ :– ಈಗ ನಾವು ಫಸ್ಟ್ ಟೈಮ್ ವಿಶ್ವವಿದ್ಯಾನಿಲಯ ಮಾಡುತ್ತಿರುವುದು, ಬೇರೆ ಎಲ್ಲಾ ಕಡೆ ಎಲ್ಲಾ ಹೋಗಿ ತಿಳಿದುಕೊಂಡು ಬರಬೇಕಾಗುತ್ತದೆ. ಇದು ಹೇಗೆ ಆಗುತ್ತದೆ.

ಶ್ರೀ ಎಂ. ವೀರಪ್ಪಮೊಯಿಲಿ :– ಬರುವ ಅಕಾಡೆಮಿಕ್ ವರ್ಷದಿಂದ ಪ್ರಾರಂಭವಾಗಬೇಕಾದ್ದು, ಮುಂದಿನ ತಿಂಗಳು ಸಮಯ ಕೊಟ್ಟು 24ನೇ ತಾರೀಕು ಮಾಡಿ ಆಮೇಲೆ ಫಸ್ಟ್ ನಾವು ಮೇ ಮೊದಲನೆ ವಾರದಲ್ಲಿ ಇದನ್ನು ಮಾಡುವುದಕ್ಕೆ ಸಾಧ್ಯವಿದೆ ಎಂದ ನಾನು ಸೂಚನೆ ಕೊಟ್ಟು ಈ ಸಮಿತಿ ಮಾಡುವದಕ್ಕೆ ವಿಧಾನ ಸಭೆಯ ಸದಸ್ಯರುಗಳ ಹೆಸರುಗಳು ಈ ಕೆಳಕಂಡ ರೀತಿಯಲ್ಲಿರುತ್ತವೆ. ಶ್ರೀಯುತರುಗಳಾದ 1) ಹೆಗ್ಗಪ್ಪ ಲಮಾಣಿ 2) ಜಿ. ಪರಮೇಶ್ವರ 3) ರಮಾನಾಥ ರೈ 4) ಎಂ.ವಿ. ವೆಂಕಟಪ್ಪ 5) ಎಸ್.ಎಂ. ಯಾಹ್ಯಾ 6) ಹೆಚ್. ವಿಶ್ವನಾಥ್ 7) ಆರ್.ಬಿ. ಚೌಧರಿ 8) ಶ್ರೀಮತಿ ಮೋಟಮ್ಮ 9) ವಿ.ಹೆಚ್. ಕೌಜಲಗಿ 10) ಪಿ.ಜಿ.ಆರ್. ಸಿಂಧ್ಯಾ 11) ಆರ್.ವಿ. ದೇಶಪಾಂಡೆ 12) ವಾಟಾಳ್ ನಾಗರಾಜ್ 13) ವಂಕಟೇಶ್ 14) ಈಶ್ವರಪ್ಪ 15) ಡಿ.ಎ. ಚೆನ್ನಪ್ಪ.

ಅಧ್ಯಕ್ಷರು :– "ಪ್ರಸ್ತಾಪ ಏನೆಂದರೆ 1992ನೇ ಇಸವಿಯ ಕರ್ನಾಟಕ ರಾಜ್ಯದ ಮುಕ್ತ ವಿಶ್ವವಿದ್ಯಾನಿಲಯದ ವಿಧೇಯಕವನ್ನು 15 ಜನ ವಿಧಾನಸಭೆಯ ಮತ್ತು 5 ಜನ ವಿಧಾನ ಪರಿಷತ್ತಿನ ಒಟ್ಟು 20 ಸದಸ್ಯರಿರುವ ಸಂಯುಕ್ತ ಪರಿಶೀಲನಾ ಸಮಿತಿಗೆ ಒಪ್ಪಿಸಬೇಕೆಂದು ಅದಕ್ಕಾಗಿ ವಿಧಾನಪರಿಷತ್ತಿನ ಒಪ್ಪಿಗೆಯನ್ನು ಪಡೆಯಬೇಕಾಗಿದೆ. ಈ ಕೆಳಕಂಡ ವಿಧಾನಸಭೆಯ ಸದಸ್ಯರು

ಸಂಯುಕ್ತ ಪರಿಶೀಲನಾ ಸಮಿತಿಯ ಸದಸ್ಯರಾಗಿರಬೇಕೆಂದು ಹಾಗೂ ಸಮಿತಿಯ ವರದಿಯನ್ನು 25–4–92ರ ಒಳಗೆ ಸದನಕ್ಕೆ ಮಂಡಿಸಬೇಕೆಂಬ ವಿಚಾರವನ್ನು ಸಭೆಯು ಅಂಗೀಕರಿಸಬೇಕು.

(ಪ್ರಸ್ತಾವಕ್ಕೆ ಅನುಮೋದನೆ ದೊರಕಿದೆ)

68ನೇ ನಿಯಮದ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪಕಾಲಾವಧಿ ಚರ್ಚೆ

ವಿಷಯ :– ಇತ್ತೀಚೆಗೆ ನಾಗರಹೊಳೆ ಅರಣ್ಯದಲ್ಲಿ ಬೆಂಕಿ ದುರಂತದಿಂದಾದ ಹಾನಿಯ ಬಗ್ಗೆ ಚರ್ಚಿಸುವುದು

+ ಶ್ರೀ ಡಿ.ಬಿ. ಚಂದ್ರೇಗೌಡ (ಮಾನ್ಯ ವಿರೋಧ ಪಕ್ಷ ನಾಯಕರು):– ಮಾನ್ಯ ಅಧ್ಯಕ್ಷರೇ, ಏಶಿಯಾ ಖಂಡದ ಅತ್ಯಂತ ಪ್ರಸಿದ್ಧವಾದಂತಹ ನಿತ್ಯ ಹರಿದ್ವರ್ಣ ಅರಣ್ಯ ಮತ್ತು ಇಡೀ ದೇಶದಲ್ಲಿಯೇ ಹೆಸರಾಗಿರತಕ್ಕಂಥ ಒಂದು ಅಭಯಾರಣ್ಯದ ದುರಂತ ನಾಶವನ್ನು ನಾನು ಇಲ್ಲಿ ಪ್ರಸ್ತಾಪ ಮಾಡುವುದಕ್ಕಾಗಿ ತಮ್ಮ ಅನುಮತಿಯನ್ನೂ ಕೇಳುತ್ತಿದ್ದೇನೆ. ಕಳೆದ ತಿಂಗಳು 12ನೇ ತಾರೀಖು ಮತ್ತು 13ರ ಬೆಳಗಿನ ಮಧ್ಯೆ ನಡೆದ ಒಂದು ಘಟನೆ ಇಡೀ ರಾಷ್ಟ್ರದ ಗಮನ ಸೆಳೆಯತಕ್ಕಂಥ ಒಂದು ದೊಡ್ಡ ದುರಂತಕ್ಕೆ ನಾಂದಿಯಾಯಿತು ಎನ್ನತಕ್ಕಂಥದ್ದರ ನಾವು ಇಲ್ಲಿ ಚರ್ಚೆ ಮಾಡುವಾಗ ಒಂದು ನೆನಪಿನಲ್ಲಿ ಇಟ್ಟುಕೊಳ್ಳಬೇಕು. ನಾಗರಹೊಳೆ ಅಭಯಾರಣ್ಯದಲ್ಲಿ ನಡೆದ ಪ್ರಕರಣವನ್ನು ನೋಡುವುದಕ್ಕಾಗಿ ನಾನು ಹೋಗಿದ್ದೆ, ನಾವು ಅದೇ ಪರಿಸರದಿಂದ ಬಂದಿರುವವರು ಆದ್ದರಿಂದ ಹೆಚ್ಚು ಆಸಕ್ತಿಯಿಂದ ಅದನ್ನು ವೀಕ್ಷಣೆ ಮಾಡುವುದಕ್ಕೆ ಪ್ರಯತ್ನ ಪಟ್ಟೆ. ಇಲ್ಲಿ ಅಪರಾಧ ಯಾರಿಂದ ಆಯಿತು? ಹೇಗೆ ಆಯಿತು? ಇದಕ್ಕೆ ಹೊಣೆ ಯಾರು? ಈ ಶಾಸನ ಸಭೆಯಲ್ಲಿ ಇದಕ್ಕೆ ಉತ್ತರ ಯಾರು ಕೊಡಬೇಕು ಎನ್ನುವ ಪ್ರಶ್ನೆ ಇಲ್ಲಿ ಇದೆ. ಅರಣ್ಯ ಇಲಾಖೆಯ ಮಂತ್ರಿಗಳಿಗೆ ಅಷ್ಟೇ ಸೀಮಿತವಾದಂತಹ ಸಮಸ್ಯೆ ಇದಲ್ಲ. ಇದು ಕಾನೂನು ಮತ್ತು ಸುವ್ಯವಸ್ಥೆಗೆ ಸಂಬಂಧಪಟ್ಟ ವಿಷಯ ಸಹ ಹೌದು. ಜೊತೆಗೆ ರಾಷ್ಟ್ರೀಯ ಅಭಯಾರಣ್ಯ ಆದ್ದರಿಂದ ಈ ಸಮಸ್ಯೆಯನ್ನು ಒಟ್ಟಾಗಿ ಇಡೀ ಸರ್ಕಾರ ತೀವ್ರ ಗಂಭೀರತೆಯಿಂದ ಆಲೋಚನೆ ಮಾಡಬೇಕೆಂದು ಹೇಳಿ ನಾನು ಪ್ರಸ್ತಾಪಕ್ಕೆ ಮುನ್ನ ನನ್ನ ಪೀಠಿಕೆ ಹೇಳುವುದಕ್ಕೆ ಪ್ರಯತ್ನ ಮಾಡಿದ್ದೇನೆ.

ಮಾನ್ಯ ಅಧ್ಯಕ್ಷರೇ, ಇಲ್ಲಿ ನಡೆದುದಾದರೂ ಏನು ? ಸ್ಥಳೀಯ ಜನಕ್ಕೆ ಅಲ್ಲಿ ಖಾಯಂ ಆಗಿ ಅರಣ್ಯ ಅಧಿಕಾರಿಯೊಬ್ಬರು ಇದ್ದರು. ಅವರ ಬಗ್ಗೆ ಸ್ಥಳೀಯ ಜನರಲ್ಲೇ ಒಂದು ರೀತಿಯ ಸಂಘರ್ಷ ಪ್ರಾರಂಭವಾಗಿತ್ತು. ಕಾರಣ ಏನೋ ಗೊತ್ತಿಲ್ಲ. ಸುಮಾರು 20 ವರ್ಷಗಳಿಂದ ಚೆನ್ನಪ್ಪ ಎನ್ನತಕ್ಕಂಥ ಅಧಿಕಾರಿ ಆ ಭಾಗದಲ್ಲಿ ಒಳ್ಳೆಯ ಕೆಲಸ ಮಾಡಿದ್ದರು. ಪರಿಸರ ಪ್ರೇಮಿ, ಎಲ್ಲಕ್ಕಿಂತಲೂ ಹೆಚ್ಚಾಗಿ ಅಲ್ಲಿ ಪೋಚರ್ಸ್ ಏನು ಇದ್ದಾರೆ, ಬೇಟೆ ಆಡತಕ್ಕಂಥ ಜನ ಇವರನ್ನು ನಿಯಂತ್ರಣದಲ್ಲಿ ತಂದಿದ್ದರು. ಇದು ಎಲ್ಲಾ ಸರಿ, ಆದರೆ ನನಗೆ ಆಶ್ಚರ್ಯ ಆದದ್ದು ಇಡೀ ಅರಣ್ಯ ಇಲಾಖೆಯಲ್ಲಿ ಚೆನ್ನಪ್ಪನ ಹೊರತುಪಡಿಸಿ ಮತ್ತೊಬ್ಬ ಪ್ರಾಮಾಣಿಕ ಅಧಿಕಾರಿ ಇಲ್ಲವೇನೋ ಎನ್ನುವ ರೀತಿಯಲ್ಲಿ ಎಲ್ಲ ಸರ್ಕಾರಗಳು ನಡೆದುಕೊಂಡಿರುವುದೇ ಈ ದುರಂತಕ್ಕೆ ಕಾರಣ. 20 ವರ್ಷಗಳಿಂದ ಆ ಅಧಿಕಾರಿಯನ್ನೆ ನೇಮಕ ಮಾಡಿದ್ದಾರೆ. ಒಂದೊಂದು ಸಾರಿ ಪ್ರಾಮಾಣಿಕತೆಗೂ ನಾವು ಬೆಲೆ ಕೊಡಬೇಕಾಗುತ್ತದೆ. ಅಂಥ ಬೆಲೆಯನ್ನು ಚೆನ್ನಪ್ಪ ಈ ಒಂದರಲ್ಲೇ ಗೆದಿದ್ದಾನೆ ಎಂದು ನನಗೆ ಗೊತ್ತು. ನಾಗರಹೊಳೆ ಆದಂತದ್ದೇ ಪ್ರಕರಣ, ಅದೇ ರೇಂಜಿನಲ್ಲಿ ಬರತಕ್ಕಂಥ ಬಂಡೀಪುರದಲ್ಲಿ ಏಕೆ ಆಗುವುದಿಲ್ಲ, ಅಥವಾ ಚಿಕ್ಕಮಗಳೂರು ಜಿಲ್ಲೆಯಲ್ಲಿ ಇರುವಂಥ ಇನ್ನೊಂದು ಅಭಯಾರಣ್ಯದಲ್ಲಿ ಏಕೆ ಆಗುವುದಿಲ್ಲ, ಇಲ್ಲೇ ಏಕೆ ಆಗಿದೆ? ಯಾವ ಜನ ಹುಟ್ಟುಸಿಂದ ಅಲ್ಲಿ ಬಾಳಿ, ಬದುಕಿ ಆರಣ್ಯದ ಬದುಕನ್ನು ಜೊತೆಗೆ ಹೊಂದಿಕೊಂಡಿದ್ದರೋ ಆ ಜನ ಅರಣ್ಯಕ್ಕೆ ಬೆಂಕಿ ಹಚ್ಚುವಂಥ ಸ್ಥಿತಿಗೆ ಅವರ ಕೋಪ ಹೋಗಿದೆ ಎಂದರೆ ಇದರ ಹಿನ್ನೆಲೆಯನ್ನು ಕಂಡುಹಿಡಿಯಬೇಕಾಗುತ್ತದೆ. ಅಧ್ಯಕ್ಷರೇ, ಈ ಹಿನ್ನೆಲೆಯಲ್ಲಿ 1992ನೇ ಇಸವಿ ಫೆಬ್ರವರಿ ತಿಂಗಳ 12ರ ನಡು ರಾತ್ರಿಯಲ್ಲಿ ಚೆಪ್ಪ ಎನ್ನತಕ್ಕಂಥವನ ಸಾವು ಸಂಭವಿಸಿತು. ಈ ಸಾವು ಒಂದು ಕೊಲೆ, ಇದರ ಬಗ್ಗೆ ಯಾರಿಗೂ ಶಂಕೆ ಇಲ್ಲ. ಆದರೆ ಕೊಲೆ